**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 15/2020 ಅ.ಸಾ. 4**

**ಚಾ.ಸಾ.4**

| | | |
|---|---|---|
| ಸಾಕ್ಷಿದಾರರ ಹೆಸರು | - | ಶೇಖರ ಪೂಜಾರಿ |
| ಗಂಡನ ಹೆಸರು | - | ಶೀನ ಪೂಜಾರಿ |
| ವಯಸ್ಸು | - | 62 ವರ್ಷ |
| ಉದ್ಯೋಗ | - | ಕೂಲಿ |
| ವಿಳಾಸ | - | ಲಕ್ಷ್ಮೀನಗರ, ತೆಂಕನಿಡಿಯೂರು,ಉಡುಪಿ ತಾಲೂಕು |

ದಿನಾಂಕಃ 28-07-2023 ರಂದು ಸಾಕ್ಷಿಯನ್ನು ಕರೆಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

1. ನಮ್ಮ ಮನೆ ತೆಂಕನಿಡಿಯೂರಿನ ಲಕ್ಷ್ಮೀನಗರದ ಮೂರನೇ ಕ್ರಾಸ್ ನಲ್ಲಿದ್ದು ಅಲ್ಲಿ ವಾಸ ಮಾಡುತ್ತೇನೆ. ಅಸಾ3 ನನ್ನ ತಂಗಿ. ಮೃತ ಯೋಗಿಶ್ ಪೂಜಾರಿ ನನ್ನ ತಂಗಿ ಮಗ. ನನ್ನ ತಂಗಿ ವಿನೋದ ಮೃತ ಪಟ್ಟಿರುತ್ತಾರೆ. ಚಾಸಾ2 ಮೃತ ಯೋಗಿಶನ ಸಹೋದರಿ. ಚಾಸಾ5 ಮೃತ ಯೋಗಿಶನ ತಂದೆ. ಚಾಸಾ5 ರವರು ಅವರ ಹೆಂಡತಿ ಮೃತಪಟ್ಟ ನಂತರ ಬೇರೆ ಮದುವೆ ಮಾಡಿಕೊಂಡು ಕಡೆಕಾರಿನಲ್ಲಿ ವಾಸವಾಗಿದ್ದಾರೆ. ಮನೆಯಲ್ಲಿ ನಾನು, ಮೃತ ಯೋಗಿಶ್ ಪೂಜಾರಿ, ಅಸಾ2, ಚಾಸಾ3 ಮತ್ತು ನನ್ನ ಇನ್ನೊಬ್ಬ ಅಣ್ಣ ಶ್ಯಾಮ ಪೂಜಾರಿ ಒಟ್ಟಿಗೆ ವಾಸ ಮಾಡುತ್ತಿದ್ದೆವು. ನನ್ನ ಅಣ್ಣ ಮಾವ ಶ್ಯಾಮ ಪೂಜಾರಿ ಅನಾರೋಗ್ಯದಿಂದ ಬಳಲುತ್ತಿದ್ದು ಮಲಗಿದಲ್ಲೇ ಇದ್ದಾರೆ.

2. ಮೃತ ಯೋಗಿಶನು ಮಲ್ಪೆಯಲ್ಲಿ ಬೋಟ್ ನಲ್ಲಿ ಮೀನುಗಾರಿಕೆ ಕೆಲಸ ಮಾಡುತ್ತಿದ್ದರು. ಮೂರು ವರ್ಷಗಳ ಹಿಂದೆ ನಾನು ಅನಾರೋಗ್ಯದ ನಿಮಿತ್ತ ಆಸ್ಪತ್ರೆಗೆ ಹೋಗಿದ್ದು ಚಿಕಿತ್ಸೆ ಪಡೆದು ಸಂಜೆ ಮನೆಗೆ ಬಂದು ವಿಶ್ರಾಂತಿ ಪಡೆಯುತ್ತಿದ್ದೆ. ರಾತ್ರಿ 11-00 ಗಂಟೆಗೆ ನಮ್ಮ ಮನೆಯ ಬಳಿ ಬೊಬ್ಬೆಯ ಶಬ್ದ ಕೇಳಿ ಎಚ್ಚರವಾಗಿ ಹೊರಗೆ ಬಂದೆ. ಆಗ ಅಸಾ2 ರವರು ಯಾರೋ ನಾಲ್ಕು ಮಂದಿ ನಮ್ಮ

ಮನೆಯ ಹೊರಗಡೆ ರಸ್ತೆಯಲ್ಲಿ ಯೋಗಿಶ್ ಪೂಜಾರಿಗೆ ಚಾಕುವಿನಿಂದ ಇರಿದು ಹಲ್ಲೆ ಮಾಡಿ ಹೋಗಿದ್ದಾರೆ ಎಂದು ತಿಳಿಸಿದರು. ನಾವು ಯೊಾಗಿಶ್ ಪೂಜಾರಿ ಹತ್ತಿರ ಹೋಗಿ ನೋಡುವಾಗ ಆತ ರಸ್ತೆ ಮೇಲೆ ಬಿದ್ದಿರುವುದನ್ನು ನೋಡಿರುತ್ತೇನೆ. ಆತನಿಗೆ ಹಲ್ಲೆ ಮಾಡಿದ ಆರು ಜನರು ಓಡಿ ಹೋಗಿರುತ್ತಾರೆ. ನೋಡುವಾಗ ಆತನ ಹೊಟ್ಟೆಗೆ, ಎದೆಗೆ ಮತ್ತು ಮೂರು ನಾಲ್ಕು ಕಡೆ ಚುಚ್ಚಿದ ಗಾಯಗಳಾಗಿ ರಕ್ತ ಚೆಲ್ಲಿತ್ತು. ನಂತರ ಸ್ಥಳದಿಂದ ಚಾಸಾ1 ಹಾಗೂ ಚಾಸಾ8 ರವರು ಆ್ಯಂಬ್ಯೂಲೆನ್ಸ್ ನಲ್ಲಿ ಯೋಗಿಶ್ ಪೂಜಾರಿಯನ್ನು ಮಣಿಪಾಲ ಆಸ್ಪತ್ರೆಗೆ ಕೊಂಡೊಯ್ದುರುತ್ತಾರೆ. ಯೊಾಗಿಶ್ ಪೂಜಾರಿಯು ಮೃತ ಪಟ್ಟಿರುತ್ತಾನೆಂದು ನಂತರ ತಿಳಿಯಿತು. ಘಟನೆ ಬಗ್ಗೆ ಅಸಾ1 ರವರು ಪೋಲಿಸರಿಗೆ ದೂರು ನೀಡಿರುತ್ತಾರೆ. ಮರಣೋತ್ತರ ಪರೀಕ್ಷೆಯ ನಂತರ ಶವದ ಅಂತ್ಯಕ್ರಿಯೆ ನಡೆದಿರುತ್ತದೆ. ನಾನು ಯೋಗಿಶ್ ಪೂಜಾರಿಯನ್ನು ಪ್ರಥಮವಾಗಿ ಸ್ಥಳದಲ್ಲಿ ನೋಡುವಾಗ ಬೇರೆ ಯಾರು ಇರಲಿಲ್ಲ. ಯೋಗಿಶ್ ಪೂಜಾರಿಯನ್ನು ಯಾರು, ಯಾವ ಹತ್ಯಾರಿನಿಂದ ಮತ್ತು ಯಾವ ಕಾರಣಕ್ಕಾಗಿ ಹಲ್ಲೆ ಮಾಡಿದ್ದಾರೆ ಎಂದು ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಹಾಗೂ ವೀಡಿಯೋ ಕಾನ್ಸರೆನ್ಸ್ ಮೂಲಕ ನೋಡುತ್ತಿರುವ 1 ಮತ್ತು 2 ನೇ ಆರೋಪಿತರನ್ನು ಈ ಹಿಂದೆ ನೋಡಿರುವುದಿಲ್ಲ. ಒಂದನೇ ಆರೋಪಿ ಹಾಗೂ ಮೃತ ಯೋಗಿಶ್ ಪೂಜಾರಿಯ ನಡುವೆ ಯಾವ ರೀತಿಯ ಸಂಬಂಧ ಇತ್ತು ಎಂದು ಗೊತ್ತಿಲ್ಲ.

3. ಈ ಪ್ರಕರಣದ ಯಾವುದೇ ಆರೋಪಿಗಳ ಪರಿಚಯ ಇರುವುದಿಲ್ಲ. ನ್ಯಾಯಾಲಯದ ಮುಂದಿರುವ 3 ರಿಂದ 6 ನೇ ಆರೋಪಿತರು ಹಾಗೂ ವೀಡಿಯೋ ಕಾನ್ಸರೆನ್ಸ್ ಮೂಲಕ ತೋರಿಸಿದ 1 ಮತ್ತು 2 ನೇ ಆರೋಪಿತರ ಪರಿಚಯ ಇಲ್ಲ. ಪೋಲಿಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆಯನ್ನು ಪಡೆದುಕೊಂಡಿಲ್ಲ. ಆರೋಪಿತರನ್ನು ಪೋಲಿಸರು ನನಗೆ ತೋರಿಸಿರುವುದಿಲ್ಲ. ನಾನು ಪೋಲಿಸರಿಗೆ ಮರು ಹೇಳಿಕೆಯನ್ನು ನೀಡಿರುವುದಿಲ್ಲ.

**( ಈ ಹಂತದಲ್ಲಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)**

**<u>ಪಾಟಿ ಸವಾಲುಃ ಸರಕಾರಿ ಅಭಿಯೋಜಕರಿಂದಃ</u>**

1. ಒಂದನೇ ಆರೋಪಿ ವಿನಯ್ ದೇವಾಡಿಗ ಮತ್ತು ಮೃತ ಯೋಗಿಶ್ ಪೂಜಾರಿ ಸ್ನೇಹಿತರಾಗಿರುವ ವಿಚಾರ ತಿಳಿದಿದೆ ಎಂದರೆ ಸರಿಯಲ್ಲ. ಈ ಪ್ರಕರಣದ 2 ರಿಂದ 6 ನೇ ಆರೋಪಿತರು ನಮ್ಮ ಪರಿಸರದಲ್ಲಿ ತಿರುಗಾಡುತ್ತಿರುವ ಸಮಯ ನಾನು ಅವರನ್ನು ನೋಡಿ ಪರಿಚಯ ಇರುತ್ತದೆ ಎಂದರೆ ಸರಿಯಲ್ಲ. ಒಂದನೇ ಆರೋಪಿಯು ನಮ್ಮ ಮನೆಗೆ ಆಗಾಗ ಬಂದು ಹೋಗುತ್ತಿದ್ದುದನ್ನು ನಾನು ನೋಡಿದ್ದೇನೆ ಎಂದರೆ ಸರಿಯಲ್ಲ. ಲಾಕ್ ಡೌನ್ ಸಮಯದಲ್ಲಿ ಒಂದನೇ ಆರೋಪಿಯು ಶರಾಬು ಕುಡಿಯುವುದನ್ನು ನೋಡಿದ್ದನ್ನು ಮೃತನು ಎಲ್ಲರಿಗೂ ಹೇಳಿ ಪದೇ ಪದೇ ಅಪಹಾಸ್ಯ ಮಾಡುತ್ತಿದ್ದುದನ್ನು ಮೃತನು ಒಂದನೇ ಆರೋಪಿಯಲ್ಲಿ ಪ್ರಶ್ನಿಸಿದಾಗ ಅವರಿಬ್ಬರ ನಡುವೆ ಮಾತಿನ ಚಕಮಕಿಯಾಗಿ ತದನಂತರ ಅವರಿಬ್ಬರು ದ್ವೇಶಿಗಳಾಗಿದ್ದರು ಎಂದರೆ ಸರಿಯಲ್ಲ.

2. ದಿಃ 06-07-2020 ರಂದು ಮೃತ ಯೊೀಗೀಶ ರಾತ್ರಿ 11-15 ಕ್ಕೆ ಪೇಟೆಯಿಂದ ಮನೆಗೆ ಬಂದವನು ಗೇಟ್ ತೆರೆದು ನಂತರ ಗೇಟ್ ಹಾಕಿ ಮನೆಯ ಛಾವಡಿಯಲ್ಲಿ ನಿಂತುಕೊಂಡು ಯಾರೊಂದಿಗೋ ಫೋನ್‌ನಲ್ಲಿ ಮಾತನಾಡುತ್ತಿದ್ದಾಗ ಗೇಟಿನ ಹೊರಗಿನಿಂದ ಯಾರೋ ಯೋಗೀಶನನ್ನು ಕರೆದ ಹಾಗೆ ಆಗಿದ್ದು, ಆಗ ಯೋಗಿಶನು ಗೇಟ್ ತೆರೆದು ಹೊರಗೆ ಹೋದ ಎಂದರೆ ಸರಿಯಲ್ಲ. ಸ್ವಲ್ಪ ಹೊತ್ತಿನ ನಂತರ ಮನೆಯ ಗೇಟಿನ ಹೊರಗಡೆ ಏನೋ ಜೋರಾಗಿ ಬಿದ್ದ ಶಬ್ದ ಕೇಳಿ ನಾನು ಹಾಗೂ ಮನೆಯವರೆಲ್ಲಾ ಹೊರಗೆ ಬಂದು ನೋಡಿದಾಗ ಮೃತ ಯೋಗಿಶ್ ಪೂಜಾರಿಯ ಬೈಕ್ ಅಡ್ಡ ಬಿದಿದ್ದು ಆತನೊಂದಿಗೆ ನಮ್ಮ ಮನೆಯ ಗೇಟಿನ ಬಳಿ 1 ರಿಂದ 6 ನೇ ಆರೋಪಿತರು ಗಲಾಟೆ ಮಾಡುತ್ತಿದ್ದುನ್ನು ನಾನು ನೋಡಿದ್ದೇನೆ ಎಂದರೆ ಸರಿಯಲ್ಲ. 4 ರಿಂದ 6 ನೇ ಆರೋಪಿತರು ಯೊೀಗೀಶನಿಗೆ ಕೈಗಳಿಂದ ಮನಬಂದಂತೆ ಹಲ್ಲೆ ಮಾಡಿ ಎರಡನೇ ಆರೋಪಿಯು ಚಾಕುವಿನಿಂದ ಯೋಗೀಶನ ಬೆನ್ನಿಗೆ ಎರಡು ಮೂರು ಬಾರಿ ಚುಚ್ಚಿ ಅದೇ ಚೂರಿಯಿಂದ ಒಂದನೇ ಆರೋಪಿಯು ಯೋಗೀಶನ ಹೊಟ್ಟೆಗೆ ತಿವಿದು ಗಾಯಗೊಳಿಸಿರುವುದನ್ನು ನಾನು ನೋಡಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ಜನ ಸೇರುವುದನ್ನು ನೋಡಿ ಅಲ್ಲೇ ಸ್ವಲ್ಪ ದೂರದಲ್ಲಿ ನಿಲ್ಲಿಸಿದ್ದ ವ್ಯಾಗನ್ ಆರ್ ಕಾರಿನಲ್ಲಿ ಹೊರಟು ಹೋಗಿರುವುದನ್ನು ನೋಡಿರುತ್ತೇನೆ ಎಂದರೆ ಸರಿಯಲ್ಲ. ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿರುವ ಬಗ್ಗೆ ದಿಃ 07-07-2020 ರಂದು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿಪಿ17 ಎಂದು ಗುರುತಿಸಲಾಯಿತು.

3. ದಿಃ 08-07-2020 ರಂದು ಉಡುಪಿ ವೃತ್ತ ನಿರೀಕ್ಷಕರು ನನ್ನನ್ನು ಅವರ ಕಚೇರಿಗೆ ಕರೆಸಿ ದಸ್ತಗಿರಿಯಾಗಿದ್ದ 1 ರಿಂದ 4 ನೇ ಆರೋಪಿತರನ್ನು ತೋರಿಸಿದ್ದು ನಾನು ಅವರನ್ನು ತಕ್ಷೀರಿನಲ್ಲಿ

ಭಾಗಿಯಾಗಿರುತ್ತಾರೆ ಎಂದು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ಅದೇ ಸಮಯ ಆರೋಪಿತರು ಕೃತ್ಯಕ್ಕೆ ಬಳಸಿದ ವ್ಯಾಗನ್ ಆರ್ ಕಾರು ಕೆಎ-20-ಎನ್-6805 ಅನ್ನು ಸಹಾ ತೋರಿಸಿದ್ದು ಅದನ್ನು ಸಹಾ ನಾನು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಬಗ್ಗೆ ಅದೇ ದಿನ ಈಗ ನನಗೆ ಓದಿ ಹೇಳಿದಂತೆ ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಮರು ಹೇಳಿಕೆಯನ್ನು ನಿಪಿ-18 ಎಂದು ಗುರುತಿಸಲಾಯಿತು.

4. ದಿಃ 12-07-2020 ರಂದು ಉಡುಪಿ ವೃತ್ತ ನಿರೀಕ್ಷಕರು ನನ್ನನ್ನು ಅವರ ಕಚೇರಿಗೆ ಕರೆಸಿ ದಸ್ತಗಿರಿಯಾಗಿದ್ದ ಈ ಪ್ರಕರಣದ 5 ನೇ ಆರೋಪಿಯನ್ನು ತೋರಿಸಿದ್ದು ನಾನು ಅವನನ್ನು ತಕ್ಷೀರಿನಲ್ಲಿ ಭಾಗಿಯಾಗಿರುತ್ತಾರೆ ಎಂದು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ಅದೇ ಸಮಯ ಆತನು ಕೃತ್ಯಕ್ಕೆ ಬಳಸಿದ ಸ್ಕೂಟರ್ ನಂಃ ಕೆಎ-20-ಇಬಿ-5237 ಅನ್ನು ಸಹಾ ತೋರಿಸಿದ್ದು ಅದನ್ನು ಸಹಾ ನಾನು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಬಗ್ಗೆ ಅದೇ ದಿನ ಈಗ ನನಗೆ ಓದಿ ಹೇಳಿದಂತೆ ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಮರು ಹೇಳಿಕೆಯನ್ನು ನಿಪಿ-19 ಎಂದು ಗುರುತಿಸಲಾಯಿತು.

5. ದಿಃ 28-08-2020 ರಂದು ಉಡುಪಿ ವೃತ್ತ ನಿರೀಕ್ಷಕರು ನನ್ನನ್ನು ಅವರ ಕಚೇರಿಗೆ ಕರೆಸಿ ದಸ್ತಗಿರಿಯಾಗಿದ್ದ ಈ ಪ್ರಕರಣದ 6 ನೇ ಆರೋಪಿಯನ್ನು ತೋರಿಸಿದ್ದು ನಾನು ಅವನನ್ನು ತಕ್ಷೀರಿನಲ್ಲಿ ಭಾಗಿಯಾಗಿರುತ್ತಾರೆ ಎಂದು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ಅದೇ ಸಮಯ ಆತನು ಕೃತ್ಯಕ್ಕೆ ಬಳಸಿದ ಮೋಟಾರ್ ಸೈಕಲ್ ನಂಃ ಕೆಎ-28-ಎಲ್-520 ಅನ್ನು ಸಹಾ ತೋರಿಸಿದ್ದು ಅದನ್ನು ಸಹಾ ನಾನು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಬಗ್ಗೆ ಅದೇ ದಿನ ಈಗ ನನಗೆ ಓದಿ ಹೇಳಿದಂತೆ ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಮರು ಹೇಳಿಕೆಯನ್ನು ನಿಪಿ-20 ಎಂದು ಗುರುತಿಸಲಾಯಿತು.

6. ಈ ಪ್ರಕರಣದ ಒಂದನೇ ಆರೋಪಿಗೆ ಮೃತ ಯೋಗೀಶನ ಮೇಲೆ ವೈಯಕ್ತಿಕ ದ್ವೇಷ ಇದ್ದ ಕಾರಣ ಆತನು 2 ರಿಂದ 6 ನೇ ಆರೋಪಿತರೊಂದಿಗೆ ಯೋಗಿಶ್ ಪೂಜಾರಿಯನ್ನು ಕೊಲೆ ಮಾಡುವ ಸಂಚು ರೂಪಿಸಿ ಅದೇ ದಿನ ರಾತ್ರಿ 11-30 ಗಂಟೆಗೆ ಮಾರಕಾಯುಧಗಳಿಂದ ಹಲ್ಲೆ ಮಾಡಿ ಕೊಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿ ಹೇಳಿಕೆಯನ್ನು ಮತ್ತು ಮರು ಹೇಳಿಕೆಯನ್ನು ನೀಡಿದ್ದರೂ ಸಹಾ ಈಗ ಆರೋಪಿಗಳಿಗೆ ಹೆದರಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಆರೋಪಿತರ ಪರವಾಗಿ ಪಾಟೀ ಸವಾಲುಃ ಶ್ರೀ ಎಂ.ಎಸ್.ಎಸ್. ವಕೀಲರಿಂದ</u>** -ಇಲ್ಲ-

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ದಿನೇಶ್ ಹೆಗ್ಡೆ)
ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.